ಇ) ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯ ಮುಖಾಂತರ ಪುನಃಶ್ಚೇತನ ಕಾರ್ಯಕ್ರಮದಡಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಹಣಕ್ಕೆ ಕಾಲಕಾಲಕ್ಕೆ ಹಾಲು ಒಕ್ಕೂಟಗಳಿಂದ ನೇರವಾಗಿ ಹಣ ಬಳಕೆ ಪ್ರಮಾಣ ಪತ್ರವನ್ನು ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಗೆ ಸಲ್ಲಿಸಲಾಗಿರುತ್ತದೆ.

ಈ) ಈ ಸಾಲಿನಲ್ಲಿ ಅನುದಾನಕ್ಕಾಗಿ ಕೇಂದ್ರ ಸರ್ಕಾರಕ್ಕೆ ಯಾವುದೇ ಬೇಡಿಕೆಯನ್ನು ಸಲ್ಲಿಸಿರುವುದಿಲ್ಲ.

**ರಾಜ್ಯದಲ್ಲಿ ಕುಸಿದಿರುವ ಅಂತರ್ಜಲ ಮಟ್ಟ ಕುರಿತು**

2263 (2847) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ತೀವ್ರ ಬರಗಾಲದ ಹಿನ್ನೆಲೆಯಲ್ಲಿ ಮಳೆಯಿಲ್ಲದೆ ಅಂತರ್ಜಲ ಮಟ್ಟವು ಕುಸಿದಿರುವುದು ನಿಜವೇ; ಅಂತರ್ಜಲ ಮಟ್ಟ ಜಿಲ್ಲಾವಾರು ವಿವರ ನೀಡುವುದು;

ಆ) ರಾಜ್ಯದ ನಾನಾ ಪ್ರದೇಶಗಳಲ್ಲಿನ ಕೊಳವೆ ಬಾವಿಗಳ ಸಮೀಕ್ಷೆ ನಡೆಸಲು ಸರ್ಕಾರ ತೀರ್ಮಾನಿಸಿದೆಯೇ;

ಇ) ಈಗಾಗಲೇ ಮಾಡಿರುವ ಸಮೀಕ್ಷೆಯಿಂದ ನೀರಿನ ಕುಸಿತದ ಮಟ್ಟ ಯಾವ ಪ್ರಮಾಣದಲ್ಲಿದೆ;

ಈ) ಕುಸಿತಕ್ಕೊಳಗಾಗದೇ ಇರುವ ನೀರಿನ ಪ್ರಮಾಣ ಮಟ್ಟ ಸರಾಸರಿ ಎಷ್ಟು;

ಉ) ಈ ಹಿನ್ನೆಲೆಯಲ್ಲಿ ನೀರಿನ ಮಟ್ಟವನ್ನು ಹೆಚ್ಚಿಸಲು ಮತ್ತು ಅಂತರ್ಜಲ ಸುಧಾರಿಸುವ ಸಲುವಾಗಿ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ) ಹೌದು. ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ.

ಆ) ಹೌದು. ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸ್ಥಿತಿಯನ್ನು ತಿಳಿದುಕೊಳ್ಳುವುದಾಗಿ ಕೊಳವೆ ಬಾವಿಗಳ ಸಮೀಕ್ಷೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಕೈಗೊಳ್ಳಲಾಗಿದೆ.

ಇ) ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ.

ಈ) ಪ್ರಸ್ತುತ ಸಾಲಿನಲ್ಲಿ ಎಲ್ಲಾ ಅಧ್ಯಯನ ಬಾವಿಗಳಲ್ಲಿ ನಿರಿನ ಮಟ್ಟ ಕುಸಿತಕ್ಕೊಳಗಾಗಿರುವುದು ಕಂಡು ಬಂದಿದೆ.

ಉ) ರಾಜ್ಯದ್ಯಂತ ಕುಸಿಯುತ್ತಿರುವ ಜಲಮಟ್ಟವನ್ನು ಸಾಧ್ಯವಾದ ಮಟ್ಟಿಗೆ ವೃದ್ಧಿಗೊಳಿಸಲು ಇಲಾಖೆಯು ಇಲ್ಲಿಯವರೆಗೆ ಒಟ್ಟು 1091 ವಿವಿಧ ಅಂತರ್ಜಲ ಮರು ಪೂರೈಕೆ ರಚನೆಗಳನ್ನು ಪ್ರಾಯೋಗಾತ್ಮಕವಾಗಿ ನಿರ್ಮಾಣ ಮಾಡಲಾಗಿದೆ. ಇದಲ್ಲದೆ ಅಂತರ್ಜಲ ಮಟ್ಟವನ್ನು ವೃದ್ಧಿಗೊಳಿಸುವ ಸಲುವಾಗಿ "ಜಲ ಸಂಪನ್ಮೂಲ ಕ್ರೋಢೀಕರಣ ಯೋಜನೆ–(ಅಂತರ್ಜಲ ಭಾಗ)" ಯೋಜನೆಯಡಿಯಲ್ಲಿ ಹಂತ ಹಂತವಾಗಿ 5 ವರ್ಷಗಳ ಅವಧಿಯಲ್ಲಿ ರಾಜ್ಯದ 58 ತಾಲ್ಲೂಕುಗಳಲ್ಲಿ 50,221 ಸಂಖ್ಯೆಯ ವಿವಿಧ ರಚನೆಗಳನ್ನು ರು. 471.00 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲು ಕ್ರಿಯಾ ಯೋಜನೆಯನ್ನು ರೂಪಿಸಿದ್ದು, ಈ ಪ್ರಸ್ತಾವನೆಯು ಆರ್ಥಿಕ ನೆರವಿಗಾಗಿ ವಿಶ್ವ ಬ್ಯಾಂಕಿನ ಪರಿಶೀಲನೆಯಲ್ಲಿದೆ.

## ಅನುಬಂಧ - 1

### ಕರ್ನಾಟಕ ರಾಜ್ಯದಲ್ಲಿನ ಜಿಲ್ಲಾವಾರು ಸರಾಸರಿ ಅಂತರ್ಜಲ ಮಟ್ಟದ ವಿವರಣಾ ಪಟ್ಟಿ

| ಕ್ರ. ಸಂ | ಜಿಲ್ಲೆ | ಅಂತರ್ಜಲ ಮಟ್ಟ (ಭೂ ಮಟ್ಟದಿಂದ ಕೆಳಕ್ಕೆ) (ಮೀಟರ್‌ಗಳಲ್ಲಿ) | | |
|---|---|---|---|---|
| | | 1997 | 2000 | 2003 |
| 1. | ಬೆಂಗಳೂರು(ನಗರ) | 13.51 | 24.65 | 36.73 |
| 2. | ಬೆಂಗಳೂರು (ಗ್ರಾಮಾಂತರ) | 13.59 | 23.09 | 28.75 |
| 3. | ಬಿಜಪುರ | 8.75 | 19.98 | 20.32 |
| 4. | ಬಾಗಲಕೋಟೆ | 10.69 | 24.70 | 24.39 |
| 5. | ಬೀದರ್ | 9.08 | 17.07 | 16.91 |
| 6. | ಬೆಳಗಾವಿ | 9.85 | 23.37 | 29.10 |
| 7. | ಬಳ್ಳಾರಿ | 7.82 | 14.24 | 26.49 |
| 8. | ಚಾಮರಾಜನಗರ | 10.78 | 21.92 | 24.76 |
| 9. | ಚಿಕ್ಕಮಗಳೂರು | 9.77 | 16.93 | 17.20 |
| 10. | ಚಿತ್ರದುರ್ಗ | 13.71 | 28.88 | 41.50 |
| 11. | ದಾವಣಗೆರೆ | 11.03 | 17.46 | 24.70 |
| 12. | ಧಾರವಾಡ | 9.86 | 34.53 | 37.00 |
| 13. | ಗದಗ | 12.49 | 32.03 | 31.33 |
| 14. | ಗುಲ್ಬರ್ಗಾ | 6.88 | 20.77 | 20.53 |
| 15. | ಹಾಸನ | 11.50 | 21.16 | 20.83 |
| 16. | ಹಾವೇರಿ | 22.55 | 27.74 | 30.95 |
| 17. | ಉತ್ತರ ಕನ್ನಡ | 8.39 | 12.54 | 13.50 |
| 18. | ಕೋಲಾರ | 13.52 | 29.19 | 32.76 |
| 19. | ಕೊಪ್ಪಳ | 8.15 | 18.09 | 22.37 |
| 20. | ಮಂಡ್ಯ | 9.38 | 16.79 | 19.45 |
| 21. | ದಕ್ಷಿಣ ಕನ್ನಡ | 8.13 | 11.79 | 34.52 |
| 22. | ಕೊಡಗು | 9.17 | 16.93 | 17.06 |
| 23. | ಮೈಸೂರು | 9.67 | 19.02 | 21.36 |
| 24. | ರಾಯಚೂರು | 5.46 | 14.09 | 11.30 |
| 25. | ಶಿವಮೊಗ್ಗ | 7.91 | 15.45 | 16.68 |
| 26. | ತುಮಕೂರು | 13.50 | 23.65 | 30.95 |
| 27. | ಉಡುಪಿ | 8.4 | 12.12 | 16.10 |